ತಾರೀಖು 17ನೆ ಡಿಸೆಂಬರ 1904.

ನಂ. ರೆ. 5349—ಲ್ಯಾ. ರೆ. 40—04-7, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 188ನೆ ಆರ್ಟಿಕಲ್ ಅನುಸರಿಸಿ, ತುಮಕೂರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾದ ಮೆ॥ ಳ. ಎಸ್. ದೊರಸ್ವಾಮಿ ಅಯ್ಯರ್ ಯವರಿಗೆ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಮೇಲ್ಕಂಡ ರಜಾ ಕಾಲದಲ್ಲಿ ಡಿಸ್ಟ್ರಿಕ್ಟಿನಲ್ಲಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರವರು ಸದರೀ ಡಿಸ್ಟ್ರಿಕ್ಟಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 19ನೆ ಡಿಸೆಂಬರ 1904.

ನಂ. ರೆ. 5333—ಲ್ಯಾ. ರೆ. 290—04-2, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 188ನೆ ಆರ್ಟಿಕಲ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟ್ ಟ್ರೈಜರಿಯ ಚಾರ್ಜಿನಲ್ಲಿರುವ ಎಕ್ಸಸ್ಟ್ರಾ ಅಸಿಸ್ಟೆಂಟ್ ಕಮಿಷನರಾದ ಮೆ॥ ಎ. ವೇದಾಂತದೇಸಿಗಂ ಅಯ್ಯಂಗಾರ್ರಿಗೆ ಬರುವ ಕ್ರಿಸ್ತಮಸ್ ರಜಾದಿನಗಳೊಂದಿಗೆ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 19ನೆ ಡಿಸೆಂಬರ 1904.

ನಂ. ರೆ. 5336—ಲ್ಯಾ. ರೆ. 157—04-8, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 188ನೆ ಆರ್ಟಿಕಲ್ ಅನುಸರಿಸಿ, ಚೆಂಗಳೂರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾದ ಮೆ॥ ಡಿ. ದೇವರಾಜೆ ಅರಸಿನವರಿಗೆ 1904ನೆ ನವಂಬರ 28ನೆ ತಾರೀಖಿನಾರಭ್ಯ 3 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ಸದರೀ ರಜಾ ಕಾಲದಲ್ಲಿ ಸೀನಿಯರ್ ಅಸಿಸ್ಟೆಂಟ್ ಕಮಿಷನರಾದ ಮೆ॥ ಎಂ. ಜೆಂಗಯ್ಯಜೆಟ್ಟಿ, ಬಿ. ಎ., ಯವರು ಸದರೀ ಡಿಸ್ಟ್ರಿಕ್ಟಿನ ಚಾರ್ಜಿನಲ್ಲಿರ್ತರು.

ತಾರೀಖು 19ನೆ ಡಿಸೆಂಬರ 1904.

ನಂ. ರೆ. 5372—ಲ್ಯಾ. ರೆ. 299-04-4, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 188ನೆ ಆರ್ಟಿಕಲ್ ಅನುಸರಿಸಿ, ಕೃಷ್ಣರಾಜಪೇಟೆ ಡಿವೀಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಾದ ಮೆ॥ ಎ. ಸುಬ್ರಹ್ಮಣ್ಯ ಅಯ್ಯರ್, ಬಿ. ಎ., ಯವರಿಗೆ 2½ ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಹೊಳಿ ಶಿವನೊಗ್ಗೆಮಾಳ್ಳರುವ ಎಕ್ಸಸ್ಟ್ರಾ ಅಸಿಸ್ಟೆಂಟ್ ಕಮಿಷನರಾದ ಮೆ॥ ಸಿ. ನಾರಾಯಣಾಯರು ಕೃಷ್ಣರಾಜಪೇಟೆ ಡಿವೀಜನಿನ ಚಾರ್ಜಿನಲ್ಲಿರಲಿಕ್ಕೆ ಮೈಸೂರ ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುತ್ತಾರೆ. ಕೂಡ್ಲೆ ಕಲಸಕ್ಕೆ ದಾಖಲಾಗತಕ್ಕದ್ದು.

ಹುಕುಂ ಬಮೋಜೀಬ್,
ಬಿ. ಕೆ. ವೆಂಕಟವರದಯ್ಯಂಗಾರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇನ್ಸ್ಪೆಕ್ಷನ್ ಹಾರ್ನ್ಸ್.

ತಾರೀಖು 14ನೆ ಡಿಸೆಂಬರ 1904.

ನಂ. 1341—7422, ಮೈಸೂರ ಪಬ್ಲಿಕ್ ವರ್ಕ್ಸ್ ಇಲಾಖಾ ಲೋಕಲ್ ಅಪ್ಪರ್ ಸಬಾರ್ಡಿನೇಟ್ ಸಿಬ್ಬಂದಿಯಲ್ಲಿ ಇದರಡಿ ಕಂಡ ಬಡ್ತಿಗಳು 1904ನೆ ಸಪ್ಟಂಬರ 9ನೆ ತಾರೀಖಿನಾರಭ್ಯ ಮಾಡಲ್ಪಟ್ಟಿರುತ್ತವೆ :—

ಡಿವೀರ್ಜ್.	ಹೆಸರು.	ಹಾಲಿ ಕ್ಲಾಸು.	ಹಾಲಿ ಜೀತ.	ಬಡ್ತಿ ಮಾಡಲ್ಪಟ್ಟ ಕ್ಲಾಸು.	ಬಡ್ತಿಯ ಜೀತ.	ಬಡ್ತಿಯಾ ಸ್ವಭಾವ.	ಷರಾ.
			ರೂ.		ರೂ.		
ಚಾನಲ್	ಮೆ॥ ಎಲ್. ಕೆ. ಸ್ವಾಮಿ ಮೂರನೆ ಕ್ಲಾಸಿನ ಮಿನಾಫ ಅಯ್ಯರ್ ಸೂಪರ್‌ವೈಜರ್ ರು		150	ಎರಡನೇ ಕ್ಲಾಸಿನ ಸೂಪರ್‌ವೈಜರ್	200	ಕಾಯಂ	ಮೃತಪಟ್ಟ ಎರಡನೆ ಕ್ಲಾಸಿನ ಸೂಪರ್ ವೈಜರಾದ ಮೆ॥ ಬಿ. ಪ ನಂತಪ್ಪನವರಿಗೆ ಬದಲಾಗಿ
ಹಾಸನ	ಮೆ॥ ಆರ್. ಸಿ. ಷೆರ್ವುಡ್ ಯವರು	ಮೊದಲನೆ ಕ್ಲಾಸಿನ ಓವರ್ಸೀರ್	100	ಮೂರನೆ ಕ್ಲಾಸಿನ ಸೂಪರ್‌ವೈಜರ್	150	ಡಿಟೋ	
ಕೋಲಾರ...	ಎಂ. ಕೃಷ್ಣರಾಯರು	ಎರಡನೆ ಕ್ಲಾಸಿನ ಓವರ್ಸೀರ್	80	ಮೊದಲನೆ ಕ್ಲಾಸಿನ ಓವರ್ಸೀರ್	100	ಡಿಟೋ	
ಚಾನಲ್ ..	ಎಚ್. ಎಸ್. ನರಸಿಂಹಯ್ಯಂಗಾರ್ಯವರು	ಹಂಗಾಮಿ ಮೂರನೆ ಕ್ಲಾಸಿನ ಓವರ್ಸೀರ್	60	ಮೂರನೆ ಕ್ಲಾಸಿನ ಓವರ್ಸೀರ್	60	ಡಿಟೋ	

1887

ತಾರೀಖು 15ನೆ ಡಿಸೆಂಬರ್ 1904.

ನಂ. 1344—7450, ಹಾಸನದ ಡಿವೀಜನಿನ ಎಕ್ಸ್ಟ್ರಕ್ಯೂಟಿವ್ ಇಂಜನಿಯರಾದ ಮೆ॥ ಸಿ. ಎ. ಮಹದೇವಶಾಸ್ತ್ರಿ, ಬಿ. ಎ. ವ ಬಿ. ಸಿ. ಇ., ಯವರಿಗೆ ಮಾಹೆ ಮಜಕೂರು 22ನೆ ತಾರೀಖಿನಾರಭ್ಯ ಎರಡು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಡಬ್ಲ್ಯೂ. ಮೆಕ್ ಹಬರ್ಡ್,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರ ಗವರ್ನ್‌ಮೆಂಟ್ ಸೆಕ್ರಟೆರಿ.

ಮುಜರೈ.

ಇಸ್ತಿಹಾರ್ನಾಮೆ.

ತಾರೀಖು 12ನೆ ಡಿಸೆಂಬರ್ 1904.

ನಂ. 2190, ಸ್ಯ 1898ನೆ ಡಿಸೆಂಬರ್ 21ನೆ ಮಕ್ತುಂ 789ನೆ ಮತ್ತು 1901ನೆ ಮೇ 4ನೆ ಮಕ್ತುಂ 1111ನೆ ನಂಬರ್ ಇಸ್ತಿಹಾರ್ನಾಮೆಗಳಿಗೆ ಬದಲಾಗಿ ಇದರಡೀ ಕಂಡ ಜನಗಳು, ಕಾಲಾತಿಕ್ರಮಣ ವ ಇತರ ಕಾರಣಗಳಿಂದ ತೆಗೆದು ಹಾಕಲ್ಪಟ್ಟವರಿಗೆ ಬದಲಾಗಿ, ಹಿರಿಯೂರಿನಲ್ಲಿರುವ ಶ್ರೀ ತ್ಯಾಗರಮಲ್ಲೇಶ್ವರ ಸ್ವಾಮಿ ದೇವಸ್ಥಾನದ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವ ಬಗ್ಗೆ ಧರ್ಮದರ್ಶಿಗಳಾಗಿ ನೊಕರರ್ಮಾಡಲ್ಪಟ್ಟಿರುತ್ತಾರೆ :—

1. ಮಾ॥ ರಾ॥ ರಾ॥ ಯಲೆ ಬಸಪ್ಪನವರು.
2. ,, ಪಟೇಲ್ ವೆಂಕಂಣನವರು.
3. ,, ಶಾನಭೋಗ ರಂಗಂಣನವರು.
4. ಮಾ॥ ರಾ॥ ರಾ॥ ಪಟ್ಟಸೆಟ್ಟಿ ತ್ಯಾಗರಪ್ಪನವರು.
5. ,, ಸಿ. ಎಕ್. ಕೃಷ್ಣಪ್ಪನವರು.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿರಾವ್,
ಮುಜರೈ ಇಲಾಖೆಯ ಸೆಕ್ರಟೆರಿ.

ಜಿಯೋಲಾಜಿಕಲ್.

ಇಸ್ತಿಹಾರ್ನಾಮೆ.

ತಾರೀಖು 20ನೆ ಡಿಸೆಂಬರ್ 1904.

ನಂ. 573—ಎಸ್., ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ XIII Aನೆ ಅಧ್ಯಾಯದ XIX A (II)ನೆ ಆರ್ಟಿಕಲ್‌ಗಳನು ಸರಿಸಿ, ಮೈಸೂರ ಸೀಮೆಯ ಫನಿಗಳ ಇನ್‌ಸ್ಪೆಕ್ಟರಾದ ಮೆ॥ ಆರ್. ಬೊಕೆಟ್ ಯವರಿಗೆ 1904ನೆ ಏಪ್ರಿಲ್ 14—16ನೆ ಮಕ್ತುಂ 603 ಎಸ್. ನೇ ನಂಬರ್ ಗವರ್ನ್‌ಮೆಂಟಿನ (ಜಿಯೋಲಾಜಿಕಲ್) ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಸ್ವಂತ ಕೆಲಸಗಳ ಮೇಲಣ ಸ್ಪೆಷಿಯಲ್ ರಜಾ ಸೇರಿರುವ ಪ್ರಿವಿಲೇಜ್ ರಜಾದೊಂದಿಗೆ, 1904ನೆ ನವಂಬರ್ 25 ವ 26ನೆ ತಾರೀಖುಗಳಲ್ಲಿ ಎರಡು ದಿನಗಳ ಸಬ್‌ಸಿಡಿಯರಿ ರಜಾ ಕೊಡಲ್ಪಟ್ಟಿತ್ತು.

2. ಮೆ॥ ಬೊಕೆಟ್ ಯವರು ಮೇಲ್ಕಂಡ ರಜಾದಿಂದ ವಾಪಸು ಬಂದು 1904ನೆ ನವಂಬರ್ 27ನೆ ತಾರೀಖಿನ ಪೂರ್ವಾಹ್ನದಲ್ಲಿ ಮೈಸೂರ ಸೀಮೆಯ ಫನಿಗಳ ಇನ್‌ಸ್ಪೆಕ್ಟರವರ ಆಫೀಸಿನ ಚಾರ್ಜನ್ನು ಪುನಃ ವಹಿಸಿರುತ್ತಾರೆ.

ಹುಕುಂ ಬಮೋಜೀಬ್,
ಡಬ್ಲ್ಯೂ. ಎಫ್. ಸ್ಮೀತ್,
ಮೈಸೂರು ಗವರ್ನ್‌ಮೆಂಟ್ ಜಿಯೋಲಾಜಿಕಲ್ ಇಲಾಖಾ ಸೆಕ್ರಟೆರಿ.